ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಮಂಗಳವಾರ, ದಿನಾಂಕ: 29ನೇ ಸೆಪ್ಟೆಂಬರ್, 2020

ರೇಷ್ಮೆ ತೆಗೆಯಲು ಹಾಗೂ ಹುರಿಮಿಷನ್‌ಗಳ ಸಹಾಯ ಧನದ ಬಗ್ಗೆ

ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

967(1052) ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಸರ್ಕಾರವು ರೇಷ್ಮೆ ನೂಲು ಬಿಚ್ಚಾಣಿಕೆದಾರರು, ರೀಲಿಂಗ್ ಘಟಕ ಹಾಗೂ ಹ್ಯಾಂಡ್ ಲ್ಯೂಂ ರವರಿಗೆ ಉತ್ತೇಜನ ನೀಡಿ ಸಹಾಯಧನವನ್ನು ನೀಡುತ್ತಿರುವಂತೆ ರೇಷ್ಮೆ ನೂಲು ಬಿಚ್ಚಾವಣಿಕೆಯಾದ ನಂತರ ರೇಷ್ಮೆ ತೆಗೆಯುವ ರಾಜ್ಯದ ಎಲ್ಲಾ ಹುರಿ ಮಿಷನ್ ಕಾರ್ಖಾನೆಯವರುಗಳಿಗೆ ಸಹಾಯಧನ ನೀಡಲಾಗುತ್ತಿದೆಯೇ;

(ಆ) ನೀಡಲಾಗಿದ್ದಲ್ಲಿ ಕಳೆದ 3 ವರ್ಷಗಳಿಂದ ಎಷ್ಟು ಸಹಾಯಧನ ನೀಡಲಾಗಿದೆ; ನೀಡದೇ ಇದ್ದಲ್ಲಿ ಯಾವ ಕಾರಣಕ್ಕಾಗಿ ಹುರಿ ಮಿಷನ್ ಕಾರ್ಖಾನೆಯವರುಗಳಿಗೆ ಸಹಾಯ ಧನ ನೀಡುತ್ತಿಲ್ಲ;

(ಇ) ಹುರಿ ಮಿಷನ್ ಕಾರ್ಖಾನೆಯವರುಗಳಿಗೂ ಸಹ ಉತ್ತೇಜನ ನೀಡಿ ಸಹಾಯಧನವನ್ನು ನೀಡಲು ಸರ್ಕಾರ ಯೋಜನೆ ರೂಪಿಸುವುದೇ?